ಹೊಸ ಸಬ್ ಸ್ಟೇಷನ್ ಹಾಕಬೇಕೆಂಬುದು ವಿದ್ಯುಚ್ಛಕ್ತಿ ಮಂಡಲಿಯ ಯೋಜನೆ. ಈಗಾಗಲೇ ಸರ್ವೆ ಕೆಲಸ ಮುಗಿದಿದ್ದು ಪ್ರಿಲಿಮಿನರಿ ವರ್ಕ್ಸ್ ಮುಗಿದೆ. ಆದರ ಪ್ರಾರಂಭ ಸಧ್ಯದಲ್ಲಿಯೇ ಆಗುತ್ತದೆ. ಎಬಿ. ಸ್ವಿಚ್ ಇಲ್ಲದೆ ಕರೆಂಟ್ ಸಪ್ಲೈ ಆಗುತ್ತಿಲ್ಲ ಎಂಬುದು ನಿಜ. ಇದಕ್ಕೆ ಬೇಕಾದಂತಹ ಸ್ವಿಚ್‌ಗಳು ಜಪಾನ್‌ನಿಂದ ಬಂದಿವೆ. ಆದರಲ್ಲಿ ಎರಡು ಸ್ವಿಚ್‌ಗಳನ್ನು ತಕ್ಷಣ ಅಲ್ಲಿಗೆ ಕಳುಹಿಸಿ ಹೆಚ್ಚಿದರೆ ೧೫ ದಿನಗಳೊಳಗೆ ಕೆವಿ. ಲೈನನ್ನು ಚಾರ್ಜ್ ಮಾಡಿದರೆ ನಿವಂಗೆ ಇರತಕ್ಕ ಸಮಸ್ಯೆ ಪರಿಹಾರವಾಗಂತ್ತದೆ. ನಾವು ಲೈನ್ ಟ್ರಿಪ್ ಮಾಡುವ ಕೆಲಸಕ್ಕೆ ಹೋಗಂವುದಿಲ್ಲ ದುರುಪಯೋಗ ಮಾಡಿಕೊಳ್ಳಿವುದಕ್ಕೆ ಹೋದರೆ ಲೈನ್ ಟ್ರಿಪ್ ಆಗುತ್ತದೆ. ಸದುಪಯೋಗ ಮಾಡಿಕೊಂಡರೆ ಆಗುವುದಿಲ್ಲ. ಆದಷ್ಟು ಎಚ್ಚರಿಕೆವಹಿಸಿ ೧೫ ದಿನಗಳಲ್ಲಿ ಅಲ್ಪಸ್ವಲ್ಪ ಪರಿಹಾರ ಒದಗಿಸುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

೨೦. ಶಿಕಾರಿಪುರದಲ್ಲಿ ಭಾಗ್ಯಜ್ಯೋತಿ ಯೋಜನೆಯನ್ವಯ ೫೦ ಸಾವಿರ ಫಲಾನುಭವಿಗಳನ್ನು ಗುರುತಿಸುವುದು

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ)·—ಸನ್ಮಾನ್ಯ ಅಧ್ಯಕ್ಷರೆ, ೧೯೮೭-೮೮ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಭಾಗ್ಯಜ್ಯೋತಿ ದೀಪದ ಯೋಜನೆ ಅನ್ವಯ ಕೇವಲ ೨೫ ಸಾವಿರ ಫಲಾನುಭವಿಗಳನ್ನು ಗುರುತಿಸಬೇಕೆಂದು ವಿದ್ಯುಚ್ಛಕ್ತಿ ಇಲಾಖೆಯಿಂದ ಆದೇಶ ಹೋಗಿದ್ದು ಈ ಹಿಂದೆ ೧೯೮೬-೮೭ನೇ ಸಾಲಿನಲ್ಲಿ ೫೦ ಸಾವಿರ ಫಲಾನುಭವಿಗಳಿಗೆ ಭಾಗ್ಯಜ್ಯೋತಿ ಸೌಲಭ್ಯ ಒದಗಿಸಿದ್ದು ರಾಜ್ಯಪಾಲರ ಭಾಷಣದಲ್ಲಿ ಸಹ ಭಾಗ್ಯಜ್ಯೋತಿ ದೀಪದ ವ್ಯವಸ್ಥೆಗೆ ಹೆಚ್ಚು ಆದ್ಯತೆ ಕೊಡುವುದಾಗಿ ತಿಳಿಸಿರುವ ಕಾರಣ ಈಗ ಮಂಜೂರು ಮಾಡಿರುವ ೨೫ ಸಾವಿರ ಫಲಾನುಭವಿಗಳ ಬದಲು ೫೦ ಸಾವಿರ ಫಲಾನುಭವಿಗಳನ್ನು ಗುರುತಿಸಿ ರಾಜ್ಯದ ಶಿಕಾರಿಪುರ ಜನತೆಗೆ ಅನುಕೂಲ ಮಾಡಿಕೊಡಂವ ಬಗ್ಗೆ ಸರ್ಕಾರದ ಹೇಳಿಕೆ ತಿಳಿಯಬಯಸುತ್ತೇನೆ

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಖಾತೆ ರಾಜ್ಯ ಮಂತ್ರಿ),—ಮಾನ್ಯ ಅಧ್ಯಕ್ಷರೆ, ಹಿಂದಿನ ಎರಡು ಮೂರು ವರ್ಷಗಳಲ್ಲಿ ಅತ್ಯಂತ ಉತ್ಸಾಹದಿಂದ ಹೆಚ್ಚಿನ ಜನರಿಗೆ ಅಂದರೆ ೫೦ ಸಾವಿರ ಜನರಿಗೆ ಭಾಗ್ಯಜ್ಯೋತಿ ಯೋಜನೆಯನ್ವಯ ವಿದ್ಯುಚ್ಛಕ್ತಿ ಒದಗಿಸಿರುವುದು ನಿಜ. ಈ ವರ್ಷ ಆ ಪ್ರಮಾಣವನ್ನು ೨೫ ಸಾವಿರಕ್ಕೆ ಇಳಿಸಿದ್ದೇವೆ. ಕಾರಣ ಇಷ್ಟು ಮಾಡಿದರೂ ಕೂಡ ಫಲಾನುಭವಿಗಳನ್ನು ಗುರುತಂ ಮಾಡಿ ಕನೆಕ್ಷನ್ ಕೊಡುವುದಕ್ಕೆ ಆಗುತ್ತಿಲ್ಲ. ಇದಕ್ಕೆ ಕಾರಣ ಇಷ್ಟೆ. ಫಲಾನುಭವಿಗಳನ್ನು ಗುರುತಿಸತಕ್ಕ ನಿಯಮದಲ್ಲಿ ಬದಲಾವಣೆಯಾಗಿದೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಈಗ ಬಂದಿರುವುದರಿಂದ ಮಂಡಲ ಪಂಚಾಯಿತಿಯವರು ಜಿಲ್ಲಾ ಪರಿಷತ್ತಿಗೆ ಫಲಾನುಭವಿಗಳನ್ನು ತಿಳಿಸಿ ಅವರು ವಿದ್ಯುಚ್ಛಕ್ತಿ ಮಂಡಲಿಗೆ ಪಟ್ಟಿಯನ್ನು ಕೊಡಬೇಕಾಗಿದೆ. ಅನೇಕ ಕಡೆಯಿಂದ ಪಟ್ಟಿ ಬಂದಿಲ್ಲ. ಅವರಿಗೆ ಒತ್ತಾಯ ಮಾಡಿದ್ದೇವೆ. ಆದರೂ ಮಾರ್ಚಿಯೊಳಗೆ ಈ ಗುರಿಯನ್ನು ಮೀರುತ್ತೇವೆ. ಗುರಿ ಮೀರಿ ಹೆಚ್ಚು ಕೆಲಸವನ್ನು ಮಾಡುವುದಕ್ಕೆ ತಯಾರಿದ್ದರೂ ಫಲಾನುಭವಿಗಳ ಪಟ್ಟಿ ಬರುತ್ತಿಲ್ಲ. ಫಲಾನುಭವಿಗಳನ್ನು ಗುರುತು ಮಾಡುವಾಗ ಇವರು ಹೇಳಿದ್ದು ಮಾಡಬೇಕೇ ಅವರು ಹೇಳಿದ್ದು ಮಾಡಬೇಕೇ ಎಂದು ಸಮಸ್ಯೆಗಳು ಬರಬಹುದು. ಫಲಾನುಭವಿಗಳನ್ನು ಗುರುತು ಮಾಡಿ ಬೇಗ ಕೊಟ್ಟರೆ ಗಂರಿ ಮೀರಿ ಸಾಧನೆಯನ್ನು ಮಾಡುವುದಕ್ಕೆ ಸಿದ್ಧರಿದ್ದೇವೆ ಎಂದಂ ಹೇಳುವುದಕ್ಕೆ ಬಯಸುತ್ತೇನೆ.

೨೧. ಚಿಕ್ಕನಾಯ್ಕನಹಳ್ಳಿ, ಮತಿಘಟ್ಟ ಮತ್ತು ದೊಡ್ಡಣಗೆರೆ, ಹುಳಿಯಾರ ರಸ್ತೆಯನ್ನು ರಿಪೇರಿ ಮಾಡಿಸುವುದು

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯ್ಕನಹಳ್ಳಿ),—ನನ್ನ ಕ್ಷೇತ್ರವಾದ ಚಿಕ್ಕನಾಯಂಕನಹಳ್ಳಿ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ, ಚಿಕ್ಕನಾಯಕನಹಳ್ಳಿಯಿಂದ ಮತಿಘಟ್ಟ ಮತ್ತು ದೊಡ್ಡಣಗೆರೆ ರಸ್ತೆ ಹುಳಿಯೂರಿನಿಂದ ತಿಪಟೂರು ಬಿದರೇಗಂಡಿ ರಸ್ತೆಗಳು ಹಾಳಾಗಿ ಹೋಗಿ ಯಾವುದೇ ವಾಹನಗಳು ಜನ ಜಾನುವಾರುಗಳು ಸಂಚರಿಸಲು ಯೋಗ್ಯವಾಗಿಲ್ಲ. ಸೈಕಲ್, ಮೋಟಾರ್ ಸೈಕಲ್‌ಗಳಂತೂ ಚಲಿಸಲು ಸಾಧ್ಯವೇ ಇಲ್ಲ. ಈಗ್ಗೆ ಮೂರು ವರ್ಷಗಳಿಂದ ಒಂದೇ ಸವನೆ ಸರಕಾರದ